

## ಮಾಹಿತಿಪೂರ್ಣ

‘ಎಲ್ಲೆಲ್ಲೂ ಇ–ವೇಸ್ಟ್’, ಮಂಜುನಾಥ್ ಹೆಬ್ಬಾರ್ ಅವರ ಮುಖಪುಟ ಲೇಖನ (ಸುಧಾ ಫೆ. 15) ಮಾಹಿತಿಪೂರ್ಣ. ಮಕ್ಕಳಿಗೆ ತಂದುಕೊಡುವ ಎಲೆಕ್ಟ್ರಾನಿಕ್ ಆಟಿಗೆಗಳೂ ಇ–ವೇಸ್ಟ್ ಸೇರುತ್ತಿವೆ. ಕೆಲವು ಕಂಪನಿಗಳು ಕಂಪ್ಯೂಟರ್‌ಗಳ (ಇ–ವಸ್ತುಗಳ) ನಿರ್ವಹಣಾ ಒಪ್ಪಂದ ಅವಧಿ ಮುಗಿದ ತಕ್ಷಣ ಹಳೆಯ ವಸ್ತುಗಳ ಬದಲಾಗಿ ಅವಶ್ಯವಿಲ್ಲದಿದ್ದರೂ ಹೊಸ ಎಲೆಕ್ಟ್ರಾನಿಕ್ ವಸ್ತುಗಳನ್ನು ಅಳವಡಿಸಿಕೊಳ್ಳುತ್ತಾರೆ. ಸಂಗ್ರಹಿಸಿದ ಎಲೆಕ್ಟ್ರಾನಿಕ್ ಕಸಕ್ಕೆ ಬೆಂಕಿ ಬಿದ್ದರೆ ಅಪಾರ ನಷ್ಟ ಸಂಭವಿಸುತ್ತದೆ. ಬೇರೆ ಎಲ್ಲಾ ಸಮಸ್ಯೆಗಳಂತೆ ಇ–ವೇಸ್ಟ್‌ನಲ್ಲೂ ಭಾರತ ವಿಶ್ವದಲ್ಲೇ ಮುಂದೆ ಇರುವುದು ವಿಷಾದದ ಸಂಗತಿ.

–ಮಹಾವೀರ ಕಾಸರ, ಶಿವಮೊಗ್ಗ, ಸು.ವಿಜಯಲಕ್ಷ್ಮಿ ಶಿವಮೊಗ್ಗ,
ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಗಾಣಧಾಳು ರಾಮಣ್ಣ ಚಿತ್ರದುರ್ಗ,
ಪತ್ತಂಗಿ ಎಸ್. ಮುರಳಿ ಬೆಂಗಳೂರು,
ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ, ರಾಜೀವ್ ಎಸ್. ಮಾಗಲ್
ಸಕಲೇಶಪುರ, ಮಧುರ ಸುಬ್ರಹ್ಮಣ್ಯ ಬೆಂಗಳೂರು

## ಓದಲಾರರು

ಈ ಲೇಖನವನ್ನು ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ಹಿತಮಿತವಾಗಿ ಬಳಸುವವರು ಖಂಡಿತಾ ಓದಲಾರರು.

–ರಾಜಶೇಖರ ಹಾದಿಮನಿ, ಧಾರವಾಡ

## ವಿಚಾರ ಲಹರಿ

‘ವಿಚಾರ ಲಹರಿ’ಯಲ್ಲಿ (ಶಿಕಾಕು) ತಾಯ್ತನದ ಮಹತ್ವವನ್ನು ಸಾರುತ್ತಲೇ ಒಂದು ಹೆಣ್ಣು ಪರಿಪೂರ್ಣವೆನಿಸಲು ಬೇಕಾಗುವ ಅಂಶಗಳನ್ನು ವರ್ಣಿಸಲಾಗಿದೆ. ಇದು ಅರ್ಥಪೂರ್ಣ.

–ಮೈ.ಸತೀಶಕುಮಾರ, ಬಂಗಾರ ಪೇಟೆ

## ನಿಜ ಸ್ಥಿತಿಯ ವಿಶ್ಲೇಷಣೆ

‘ನಿಮ್ಮೊಡನೆ’ಯಲ್ಲಿ ‘ಪ್ರವಾಸಿಗರಿಗೆ ನೀತಿ ಸಂಹಿತೆ’ (ರಘುನಾಥ ಚ.ಹ.) ಬರಹದಲ್ಲಿ ಲೇಖಕರು ಸದ್ಯದ ನಿಜಸ್ಥಿತಿಯನ್ನು ವಿಶ್ಲೇಷಿಸಿದ್ದಾರೆ. ಹಲವರಿಗೆ ಪ್ರವಾಸ ಎನ್ನುವುದು ಕೇವಲ ಮೋಜು ಮಸ್ತಿಯ ಕಾಲಹರಣ.

–ಶ್ರೀನಾಥ್ ಕೊನೇಟಿ ಬೆಂಗಳೂರು

## ಕಣ್ಮನ ಸೆಳೆದವು

ಪ್ರವಾಸ ಲೇಖನ ‘ಶರದೃತುವಿನಲ್ಲಿ ಕವಳ’ (ರಾಜು ಎಲ್.ಎಸ್) ಸುಂದರವಾಗಿತ್ತು. ಚಿತ್ರಗಳು ಕಣ್ಮನ ಸೆಳೆದವು.

–ರವೀಂದ್ರನಾಥ. ಶಿ. ಯಡಹಳ್ಳಿ, ಬೀಳಗಿ

## ನೂರಕ್ಕೆ ನೂರು ಅಂಕ

‘ವೃತ್ತಿಗಿರಲಿ ಅಭಿವೃದ್ಧಿ ಕೌಶಲ್ಯ’ (ಆರ್.ಬಿ. ಗುರು ಬಸವರಾಜ) ಲೇಖನ ಚೆನ್ನಾಗಿದೆ. ಇಂದು ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ನೂರಕ್ಕೆ ನೂರು ಅಂಕಗಳನ್ನು ತರುವವರಿದ್ದಾರೆ. ಆ ಜಾಣತನ ಬಿಕರಿ ಮಾಡುವ ಶೈಕ್ಷಣಿಕ ಸಂಸ್ಥೆಗಳು ಅಲ್ಲಲ್ಲಿ ಇರುವುದು ಸುಳ್ಳಲ್ಲ!

–ಕೊಹಿಮ ಬಸರಕೋಡು

## ಜಾಲಿಯ ಮರವು ನೆರಳಲ್ಲ!

‘ಔಷಧೀಯ ಜಾಲಿಮರ’ (ಲತಾ ಹೆಗಡೆ) ಚಿತ್ರಲೇಖನ ಮಾಹಿತಿ ಪೂರ್ಣ. ಜಾಲಿಮರದ ವಿವಿಧ ಉಪಯೋಗ ತಿಳಿದು, ಆ ಮರಕ್ಕಿರುವ ‘ನೆರಳಲ್ಲ’ ಎಂಬ ಆಪಾದನೆ ಹೊಡೆದು ಹೋಯ್ತು!

–ನಾರಾಯಣ ಯಾಜಿ, ಶಿರಾಲಿ, ಅರವಿಂದ ಜಿ. ಜೋಷಿ ಮೈಸೂರು

## ಆನೆಯ ಮನದಾಳ



‘ಎಲ್ಲೂ ಹೋಗಲ್ಲ..’ (ನೇಸರ ಕಾಡನಕುಪ್ಪೆ) ಲೇಖನ ಮನಸೆಳೆಯಿತು. ತಾನು ಬೆಳೆದ ಪರಿಸರ ಹಾಗೂ ಸಂಗಾತಿಗಳನ್ನು ಬಿಟ್ಟು ಹೋಗಲು ಮನಸ್ಸಿಲ್ಲದ ಆನೆ ಅಜ್ಜಯ್ಯನ ಮನದಾಳದ ಸ್ವಗತ ಮನಸ್ಸನ್ನು ಆರ್ದ್ರವಾಗಿಸಿತು, ಇತ್ತೀಚೆಗೆ ತಾನೆ ದುಬಾರೆ ಆನೇಬೀಡಿನಲ್ಲಿ ಕಂಡಿದ್ದ ಗಜಪಡೆಯ ವಿಹಾರ, ವಿಲಾಸ, ಜಲಕ್ರೀಡೆಗಳು ಕಣ್ಣಮುಂದೆ ಮರುಕಳಿಸಿದವು.

–ಮುಕುಂದ ಹೆರಕಲ್ಲ, ಕಲಬುರ್ಗಿ, ಎಸ್.ಓಂಕಾರಯ್ಯ ತವನಿಧಿ
ದಾವಣಗೆರೆ, ಸುಂದರ್ ಬೆಂಗಳೂರು, ಕೋಟೇಶ್ವರ
ಸೂರ್ಯನಾರಾಯಣರಾವ್ ಬೆಂಗಳೂರು, ಎಂ.ಎಸ್. ಬೆಂಗಳೂರು
ಕೆ.ಪಿ. ರಾಮಗುಂಡಿ, ಬೈಲಹೊಂಗಲ, ವೇದಾವತಿ ಎಂ. ಕೆ.ಆರ್. ಪೇಟೆ

## ಕಡುಬು ಚೆನ್ನಾಗಿತ್ತು

ಆಹಾರ ಪುಟದಲ್ಲಿ ‘ರುಚಿ ರುಚಿ ಹಬೆ ಕಡುಬು’ (ಶಾಲಿನಿ ನಾಯಕ್) ಚೆನ್ನಾಗಿತ್ತು.

–ರತ್ನಾಕರ ಹೆಗಡೆ ಕಟ್ಟೆ, ಮೂಡುಬಿದಿರೆ

## ಸಂಗೀತ ಯಾತ್ರೆ

‘ಭೈರವ್ ಸೆ ಭೈರವಿ ಥಕ್’ (ಉಮಾ ಅನಂತ್) ಸಂದರ್ಶನ ಬರಹ ಓದಿ ಖುಷಿಯಾಯಿತು. ರಾಜನ್–ಸಾಜನ್ ಮಿಶ್ರಾ ಸಹೋದರರು ‘ಸಂಗೀತವೇ ನಮಗೆ ಪೂಜೆ’ ಎನ್ನುವ ವ್ಯಾಖ್ಯಾನದೊಂದಿಗೆ ಕಛೇರಿ ಆರಂಭಿಸುವ ಗಾಯಕರು, ಸಂಗೀತ ವಿಶ್ವಭಾಷೆ, ಹೃದಯಭಾಷೆ ಎಂಬುದನ್ನು ಜಗತ್ತಿಗೆ ಸಾರಲು ಸಂಗೀತ ಯಾತ್ರೆ ಹೊರಟಿರುವುದು ನಿಜಕ್ಕೂ ಶ್ಲಾಘನೀಯ.

–ಪಿ. ಜಯವಂತ ಪೈ, ಕುಂದಾಪುರ, ಪ.ಚಂದ್ರಕುಮಾರ ಗೌನಹಳ್ಳಿ


